## 44. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಡುಗಣಿ, ಶಿಕಾರಿಪುರ ತಾ॥

ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಉಡುಗಣಿ, ತಾ॥ ಶಿಕಾರಿಪುರ ಶಿವಮೊಗ್ಗ ಜಿ॥ ಈ ಸದರಿ ಶಾಲೆಯ 2019-20ನೇ ಸಾಲಿನ 1 ರಿಂದ 7ನೇ ತರಗತಿಯ ಒಟ್ಟು ಮಕ್ಕಳ ಸಂಖ್ಯೆ 230 ಇದ್ದು ಸದರಿ ಶಾಲೆಯಲ್ಲಿ 08 ಜನ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ, ಜೂನ್ ತಿಂಗಳ ಶೈಕ್ಷಣಿಕ ಪ್ರಗತಿಯು ಶಾಲಾ ಪ್ರಾರಂಭೋತ್ಸವ ಹಾಗೂ ಸೇತು ಬಂಧ ಕಾರ್ಯಕ್ರಮವನ್ನು ಜಾರಿ ಮಾಡಿದ್ದು ಆ ಪ್ರಕಾರ ಸೇತುಬಂಧ ಕಾರ್ಯಕ್ರವನ್ನು ನಡೆಸಲಾಗಿತ್ತು, ನಂತರ ಜುಲೈ ತಿಂಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಜಾರಿಯಲ್ಲಿದ್ದು ಕಲಿಕೆಯು ಉತ್ತಮವಾಗಿರುತ್ತದೆ, ಜುಲೈ ತಿಂಗಳ ಕೊನೆಯ ವಾರದಲ್ಲಿ ರೂಪಣಾತ್ಮಕ 1ನ್ನು ತುಂಬಲಾಗಿತ್ತು, ನಂತರ ಜುಲೈ ತಿಂಗಳಲ್ಲಿ ಸದರಿ ಗ್ರಾಮದ ಶಿಕ್ಷಣಾಸಕ್ತರಾದ ಶ್ರೀಯುತ ಮಧು ಎಂ ಇವರು 230 ಮಕ್ಕಳನ್ನು ನೋಟ್ ಪುಸ್ತಕ 6 ರಂತೆ ಕೊಡುಗೆಯಾಗಿ ನೀಡಿದ್ದು ಇದನ್ನು ಸುಂದರವಾದ ಒಂದು ಕಾರ್ಯಕ್ರಮದ ವೇದಿಕೆ ಸಿದ್ದಪಡಿಸಿಕೊಂಡು ದಾನಿಗಳಾದ ಶ್ರೀಯುತ ಮಧು ಅವರಿಂದ 230 ಮಕ್ಕಳಿಗೂ ಉಚಿತ ನೋಟ್ ಪುಸ್ತಕ ವಿತರಿಸುವ ಕಾರ್ಯಕ್ರಮ ಜರುಗಿತು,

ಆಗಸ್ಟ್ ತಿಂಗಳಲ್ಲಿ ಬಳ್ಳಿಗಾವಿ ವಲಯ ಮಟ್ಟದ ಕ್ರೀಡಾಕೂಟವನ್ನು ನಡೆಸಲು ಸಿದ್ದತೆ ಮಾಡಿಕೊಂಡು ಈ ಕ್ರೀಡಾಕೂಡವನ್ನು ಸಂಪೂರ್ಣವಾಗಿ ಆಯೋಜಿಸುವ ಹೊಣೆಗಾರಿಕೆಯನ್ನು ಹೊತ್ತುಕೊಂಡು ಗ್ರಾಮಸ್ಥರ ಸಹಕಾರ ಹಾಗೂ ಎಸ್.ಡಿ.ಎಂ.ಸಿ ಅವರ ಸಹಕಾರ ಹಾಗೂ ಗ್ರಾಮ ಪಂಚಾಯತಿಯವರ ನಹಕಾರದೊಂದಿಗೆ ಕ್ರೀಡಾಕೂಟವನ್ನು ಅತ್ಯಂತ ಯಶಸ್ವಿಯಾಗಿ ನಡೆಸಿಕೊಡಲಾಗಿತ್ತು, ಈ ಕ್ರೀಡಾಕೂಟಕ್ಕೆ ಗ್ರಾಮ ಪಂಚಾಯತಿಯಿಂದ 10000 ರೂ, ಹಾಗೂ ಎಸ್.ಡಿ.ಎಂ.ಸಿ ಅವರಿಂದ 10000 ರೂ.ಗಳನ್ನು ದೇಣಿಗೆಯ ರೂಪದಲ್ಲಿ ಸಹಾಯ ಸಹಕಾರ & ಗ್ರಾಮಸ್ಥರ ನೆರೆವಿನಿಂದ ಕ್ರೀಡಾಕೂಟವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲಾಗಿತು.

ಆಗಸ್ಟ್ ಕೊನೆಯ ವಾರದಲ್ಲಿ ಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿಯನ್ನು ಶಿರಾಳಕೊಪ್ಪದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದಲ್ಲಿ ಅನೇಕ ಬಹುಮಾನಗಳು ಸದರಿ ಶಾಲಾ ಮಕ್ಕಳಿಗೆ ಲಭಿಸಿದ್ದು, ಕಿರಿಯರ ವಿಭಾಗದಲ್ಲಿ ಜಾನಪದ ನೃತ್ಯ, ಕೋಲಾಟ, ಕಂಠಪಾಠ, ಧಾರ್ಮಿಕ ಪಠಣ ಮುಂತಾದವು ತಾಲೂಕು ಮಟ್ಟಕ್ಕೆ ಆಯ್ಕೆಯಾದರೆ ಹಿರಿಯರ ವಿಭಾಗದಲ್ಲಿ ಕೋಲಾಟ, ಧಾರ್ಮಿಕ ಪಠಣ, ಆಶುಭಾಷಣ, ಚಿತ್ರಕಲೆ ಕಾರ್ಯಕ್ರಮದಲ್ಲಿ ಭಾಗವಹಿಸಿ ಈ ಮೇಲಿನ ಎಲ್ಲಾ ಸ್ಪರ್ಧೆಯಲ್ಲಿ ತಾಲ್ಲೂಕು ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.











